# ಕರ್ನಾಟಕ ಜಾನಪದ ವಿಶ್ವವಿದ್ಯಾಲಯ

ಗೊಟಗೋಡಿ, ರಾ.ಹೆ. –4, ಶಿಗ್ಗಾವಿ ತಾ. ಹಾವೇರಿ ಜಿಲ್ಲೆ – 581 205

## ಅಧಿಸೂಚನೆ

ಕ.ಜಾ.ವಿ.ವಿ.ಆವಿ./ ಮನ್ನಣೆ/ಕ್ರಮಾಂಕ: 2019–20/375 ದಿನಾಂಕ: 24.07.2019

ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಈ ಕೆಳಗಿನ ವಿವಿಧ ಡಿಪ್ಲೊಮಾ ಮತ್ತು ಸರ್ಟಿಫಿಕೇಟ್ ಕೋರ್ಸ್‌ಗಳನ್ನು 2019–20ನೇ ಸಾಲಿನಲ್ಲಿ ನಡೆಸಲು ವಿಶ್ವವಿದ್ಯಾಲಯದಿಂದ ಮನ್ನಣೆ ಕೋರಿ ಅರ್ಜಿ ಸಲ್ಲಿಸುವಂತೆ ಸಂಘ ಸಂಸ್ಥೆ ಹಾಗೂ ಶಾಲಾ–ಕಾಲೇಜುಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

| | ಕೋರ್ಸ್‌ಗಳು | ವಿಷಯ |
|---|---|---|
| 1 | ಸ್ನಾತಕೋತ್ತರ ಡಿಪ್ಲೊಮಾ ಕೋರ್ಸ್ | ಪಾರಂಪರಿಕ ಹೈನುಗಾರಿಕೆ ಮತ್ತು ಜಾನಪದ ಡಿಪ್ಲೊಮಾ |
| 2 | ಡಿಪ್ಲೊಮಾ ಕೋರ್ಸ್ | ಬಯಲಾಟ (ಮೂಡಲಪಾಯ)ಮತ್ತು ಯಕ್ಷಗಾನ ಬಯಲಾಟ |
| 3 | ಸರ್ಟಿಫಿಕೇಟ್ ಕೋರ್ಸ್‌ಗಳು | ದೊಡ್ಡಾಟ, ಸಣ್ಣಾಟ, ಕಸೂತಿ ಕಲೆ, ಜನಪದ ಪ್ರವಾಸೋದ್ಯಮ, ಜನಪದ ಗೀತ ಸಂಪ್ರದಾಯ, ಡೊಳ್ಳು ಕುಣಿತ, ಜನಪದ ನೃತ್ಯ, ಬಿದರಿ ಕಲೆ, ಬೀಸು ಕಂಸಾಳೆ, ಸಮರ ಕಲೆ, ತೊಗಲು ಗೊಂಬೆಯಾಟ, ಜನಪದ ಅಡುಗೆ, ಸಾಂಪ್ರದಾಯಿಕ ಸಮರ ಕಲೆಗಳು ಹಾಗೂ ಗ್ರಾಮೀಣ ಕ್ರೀಡೆಗಳು, ಗ್ರಾಮೀಣ ಹಾಗೂ ಬುಡಕಟ್ಟು ಯುವಜನ ಸೇವೆ ಮತ್ತು ಸಾಂಪ್ರದಾಯಿಕ ಕ್ರೀಡೆ, ಯೋಗ, ಜನಪದ ವಾಸ್ತು |

**ಸೂಚನೆಗಳು:**

1. ಮನ್ನಣೆ ಪಡೆಯಲು ಬಯಸಿದವರು ಅರ್ಜಿ ನಮೂನೆಯನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್ **WWW.janapadauniversity.ac.in** ನಲ್ಲಿ ಡೌನ್‌ಲೋಡ್ ಮಾಡಿ, ಅರ್ಜಿಯಲ್ಲಿರುವಂತೆ ಮಾಹಿತಿಗಳನ್ನು ಭರ್ತಿ ಮಾಡಿ ದಾಖಲೆಗಳೊಂದಿಗೆ ವಿಶ್ವವಿದ್ಯಾಲಯಕ್ಕೆ **ದಿನಾಂಕ: 08.08.2019** ರೊಳಗಾಗಿ ಕುಲಸಚಿವರು, ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಇವರ ಹೆಸರಿಗೆ ಸಲ್ಲಿಸಬೇಕು.

2. ಹೊಸದಾಗಿ ಮನ್ನಣೆಗಾಗಿ ಅರ್ಜಿ ಸಲ್ಲಿಸುವ ಸಂಸ್ಥೆಯ ಭೌತಿಕ ಪರಿಶೀಲನೆಗಾಗಿ ತೆರಳುವ ವಿಶ್ವವಿದ್ಯಾಲಯದ ಪರಿಶೀಲನಾ ಸಮಿತಿ ವೆಚ್ಚ ರೂ. 20,000/- (ಇಪ್ಪತ್ತು ಸಾವಿರ ರೂ.ಗಳು ಮಾತ್ರ)ಗಳನ್ನು ಅರ್ಜಿಯೊಂದಿಗೆ ಡಿ.ಡಿ. ಮೂಲಕ **ಹಣಕಾಸು ಅಧಿಕಾರಿಗಳು, ಕರ್ನಾಟಕ ಜಾನಪದ ವಿಶ್ವವಿದ್ಯಾಲಯ** ಇವರ ಹೆಸರಿನಲ್ಲಿ ಎಸ್.ಬಿ.ಐ. **ಬ್ಯಾಂಕ್, ಶಿಗ್ಗಾವಿ ಶಾಖೆಗೆ** ಸಂದಾಯವಾಗುವಂತೆ ಮುಂಗಡವಾಗಿ ಪಾವತಿಸಬೇಕು.

3. 2017–18, 2018–19ನೇ ಸಾಲಿನಲ್ಲಿ ವಿಶ್ವವಿದ್ಯಾಲಯದ ವಿವಿಧ ಸರ್ಟಿಫಿಕೇಟ್ ಹಾಗೂ ಡಿಪ್ಲೊಮಾ ಕೋರ್ಸುಗಳನ್ನು ನಡೆಸಲು ಮನ್ನಣೆ ಪಡೆದಿರುವ ಸಂಸ್ಥೆಗಳು, 2017–18 ಹಾಗೂ 2018–19ನೇ ಸಾಲಿನಲ್ಲಿ ವಿವಿಧ ಸರ್ಟಿಫಿಕೇಟ್ ಹಾಗೂ ಡಿಪ್ಲೊಮಾ ಕೋರ್ಸುಗಳನ್ನು ನಡೆಸಿರುವ ಸಂಬಂಧವಾಗಿ ವಿಶ್ವವಿದ್ಯಾಲಯದಿಂದ ಪಡೆದಿರುವ ಮನ್ನಣೆ ಆದೇಶ, ವಿದ್ಯಾರ್ಥಿಗಳ ಪ್ರವೇಶಾತಿ ಪಟ್ಟಿ ಮತ್ತು ಪರೀಕ್ಷಾ ಹಾಜರಾದ ವಿದ್ಯಾರ್ಥಿಗಳ ಪಟ್ಟಿಯನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುವ ಮಾಹಿತಿಯ ಪ್ರತಿಗಳನ್ನು ಲಗತ್ತಿಸಿ 2019–20ನೇ ಸಾಲಿನಲ್ಲಿಯೂ ಕೂಡ ವಿವಿಧ ಸರ್ಟಿಫಿಕೇಟ್ ಹಾಗೂ ಡಿಪ್ಲೊಮಾ ಕೋರ್ಸುಗಳನ್ನು ನಡೆಸಲು ಬಯಸಿದಲ್ಲಿ ತಮ್ಮ ಸಂಸ್ಥೆಯನ್ನು ಪುನರ್ ಪರಿಶೀಲಿಸಲು ಪರಿಶೀಲನಾ ಸಮಿತಿ ವೆಚ್ಚ ರೂ. 10,000/- (ಹತ್ತು ಸಾವಿರ ರೂ.ಗಳು ಮಾತ್ರ) ಗಳನ್ನು ವಿಶ್ವವಿದ್ಯಾಲಯಕ್ಕೆ ಅರ್ಜಿಯೊಂದಿಗೆ ಡಿ.ಡಿ. ಮೂಲಕ **ಹಣಕಾಸು ಅಧಿಕಾರಿಗಳು, ಕರ್ನಾಟಕ ಜಾನಪದ ವಿಶ್ವವಿದ್ಯಾಲಯ** ಇವರ ಹೆಸರಿನಲ್ಲಿ **ಎಸ್.ಬಿ.ಐ. ಬ್ಯಾಂಕ್, ಶಿಗ್ಗಾವಿ ಶಾಖೆಗೆ** ಸಂದಾಯವಾಗುವಂತೆ ಮುಂಗಡವಾಗಿ ಪಾವತಿಸಬೇಕು.

ಆದೇಶದ ಮೇರೆಗೆ,

ಕುಲಸಚಿವರು